3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.271/2024**

ಪ್ರಾಸಾ 2

ಚಾಸಾ 3

| | |
|---|---|
| ಹೆಸರು | ನರಸಮ್ಮ |
| ಗಂಡನ ಹೆಸರು | ಲೇಟ್ ಗಿರಿಯಪ್ಪ |
| ವಯಸ್ಸು | 70 ವರ್ಷ |
| ಉದ್ಯೋಗ | ಗೃಹಿಣಿ |
| ವಾಸಸ್ಥಳ | ಕುಳ್ಳಿನಂಜಯ್ಯನಪಾಳ್ಯ |

ಸಾಕ್ಷಿಯನ್ನು ದಿನಾಂಕ 18.02.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನಾನು ಪರಿಶಿಷ್ಟ ಜಾತಿಯ ಆದಿದ್ರಾವಿಡ ಜನಾಂಗಕ್ಕೆ ಸೇರಿರುತ್ತೇನೆ. ನನಗೆ ಮೂರು ಗಂಡು ಮತ್ತು ಒಂದು ಹೆಣ್ಣು ಮಗಳು ಇರುತ್ತಾಳೆ. ನನ್ನ ಮೊದಲನೇ ಮಗ ರಾಜ, 2 ನೇ ಮಗನ ಹೆಸರು ಕುಮಾರ ಹಾಗೂ 3 ನೇ ಮಗನ ಹೆಸರು ಮರಿಯಪ್ಪ ಹಾಗೂ ಮಗಳ ಹೆಸರು ಗಂಗಾ. ಮರಿಯಪ್ಪನಿಗೆ ಮದುವೆಯಾಗಿದ್ದು 4 ನೇ ಆರೋಪಿ ಆತನ ಹೆಂಡತಿ. ಆತನಿಗೆ 4 ಜನ ಹೆಣ್ಣು ಮಕ್ಕಳು. ಅವರ ಹೆಸರು ಹೇಮಲತಾ, ಧನಲಕ್ಷ್ಮಿ, ಮಮತಾ ಮತ್ತು ಹರ್ಷಿತಾ.

2) ಒಂದು ವರ್ಷದ ಹಿಂದೆ ಸಂಜೆ ನನ್ನ ಮಗ ಕುಣಿಗಲ್ ಗೆ ಹೋಗಿದ್ದ. ಆದರೆ ರಾತ್ರಿ 10.30 ಗಂಟೆಯಾದರೂ ಮನೆಗೆ ವಾಪಸಿ ಬರಲಿಲ್ಲ. ನನಗೆ ಬಿಪಿ ಮತ್ತು ಸಕ್ಕರೆ ಕಾಯಿಲೆ ಇರುವುದರಿಂದ ಮಾತ್ರೆ ತೆಗೆದುಕೊಂಡು ಮಲಗಿಕೊಂಡಿರುತ್ತೇನೆ. ಮಾರನೇ

ದಿನ ಬೆಳಿಗ್ಗೆ 5 ಗಂಟೆಗೆ ಚಾಸಾ.1 ರವರ ಬಳಿ ಮರಿಯಪ್ಪರವರು ಬಂದಿಲ್ಲ ಎಂದು ಕೇಳಲು ಹೋಗಿದ್ದೆ, ಆಗ ಚಾಸಾ.1 ರವರು ಹಾಲು ಕರೆಯುತ್ತಿದ್ದು ಅಷ್ಟರಲ್ಲಿ ಜಯರಾಮರವರ ಮಗ ಕಿಶೋರರವರು ಬಂದು ಅರಕೆರೆಯ ಕಪ್ಪಯ್ಯನ ಗದ್ದೆಯಲ್ಲಿ ಮರಿಯಪ್ಪನನ್ನು ಹೊಡೆದು ಮಲಗಿಸಿರುತ್ತಾರೆಂದು ಹೇಳಿರುತ್ತಾನೆ. ನಂತರ ನಾವೆಲ್ಲರೂ ಸ್ದಳಕ್ಕೆ ಓಡಿ ಹೋಗಿರುತ್ತೇವೆ. ಸ್ದಳಕ್ಕೆ ಹೋಗಿ ನೋಡಿದಾಗ ನನ್ನ ಮಗನ ಒಂದು ಕೈ ತುಂಡಾಗಿ ಪಕ್ಕದಲ್ಲಿ ಬಿದ್ದಿತ್ತು, ಇನ್ನೊಂದು ಕೈ ತುಂಡಾಗಿ ಜರ್ಕಿನ್ ನಲ್ಲಿ ನೇತಾಡುತ್ತಿತ್ತು. ನನ್ನ ಮಗನ ತಲೆ, ಬಾಯಿ, ಕೈ ಮತ್ತು ಕಾಲುಗಳಿಗೆ ಗಾಯಗಳಾಗಿತ್ತು. ತಲೆಗೆ ಏಟಾಗಿ ಓಪನ್ ಆಗಿತ್ತು. ನನ್ನ ಮಗನ ಫೋನ್ ಸ್ವಲ್ಪ ದೂರದಲ್ಲಿ ಬಿದ್ದಿತ್ತು. ಸ್ದಳಕ್ಕೆ ಪೊಲೀಸರು ಬಂದಿದ್ದರು. ನನ್ನ ಮಗನ ಬಟ್ಟೆಗಳೆಲ್ಲಾ ರಕ್ತ ಆಗಿತ್ತು.

3) ನನ್ನ ಮಗ ಮರಿಯಪ್ಪ ಹೇಮಲತಾರವರನ್ನು 1 ನೇ ಆರೋಪಿಯನ್ನು ಮದುವೆಯಾಗಬೇಡ ಎಂದು ಹೇಳಿದ್ದ. ಅವರ ಹೆಂಡತಿಗೂ ಸಹ ಸದರಿ ವಿಚಾರವನ್ನು ಹೇಳಿದಾಗ 4 ನೇ ಆರೋಪಿಯು ತನ್ನ ಮಗಳಿಗೆ ಹೇಳುವುದಾಗಿ ಹೇಳುತ್ತಿದ್ದರು. ಮರಿಯಪ್ಪರವರು ತನ್ನ ಹೆಂಡತಿಯ ತವರು ಮನೆಯ ಜಮೀನಿಗೆ ಸಂಬಂಧಿಸಿದಂತೆ ವಿವಾದ ಇತ್ತು. ಆ ಸಂಬಂಧ 4 ನೇ ಆರೋಪಿ ಮತ್ತುಮರಿಯಪ್ಪರವರು ಕುಣಿಗಲ್ ಪೋ,ಠಾಣೆಗೆ ಹೋಗಿ ಬರುತಿತದ್ದರು. 4 ನೇ ಆರೋಪಿ ಮತ್ತು ಹೇಮಲತಾರವರಿಗೆ ಪ್ರೀತಿಯ ವಿಚಾರದಲ್ಲಿ ಮತ್ತು ಆಸ್ತಿಯ ವಿಚಾರದಲ್ಲಿ ಮರಿಯಪ್ಪರವರ ಮೇಲೆ ದ್ವೇಷ ಇತ್ತು. ನನ್ನನ್ನು ಪೋ.ಠಾಣೆಗೆ ಕರೆಸಿದ್ದು ಅಲ್ಲಿ ನನಗೆ ಗೊತ್ತಿರುವ ವಿಚಾರಗಳನ್ನು ಹೇಳಿರುತ್ತೇನೆ.

4) 1 ನೇ ಆರೋಪಿ ನನ್ನ ಸಂಬಂಧಿ. 3 ನೇ ಆರೋಪಿ ಮರಿಯಪ್ಪರವರ ಭಾವಮೈದುನ. 4 ನೇ ಆರೋಪಿ ನನ್ನ ಸೊಸೆ.

(ಆರೋಪಿಗಳ ಪರ ವಕೀಲರು ಪಾಟೀಸವಾಲಿಗೆ ಕಾಲವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ

ಸಾಕ್ಷಿಯನ್ನು ದಿನಾಂಕ 19.02.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀಸವಾಲುಃ 3 ಮತ್ತು 4 ನೇ ಆರೋಪಿಗಳ ಪರ ಶ್ರೀ.ಸಿ.ಆರ್.ಕೆ. ವಕೀಲರಿಂದಃ**

5) ಈ ಘಟನೆಯಾಗುವುದಕ್ಕಿಂತ ಮುಂಚೆ ನನ್ನ ಮಗ ಮರಿಯಪ್ಪ ರವರ ಮನೆಯಲ್ಲಿ ಇರುತ್ತಿದ್ದೆ. ಈ ಘಟನೆಯಾದ ನಂತರ ನಾನು ಚಾಸಾ.1 ರವರೊಂದಿಗೆ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ಮಗ ಮರಿಯಪ್ಪ ಎಲ್ ಐ ಸಿ ಪಾಲಿಸಿಯಲ್ಲಿ ನನ್ನ ಹೆಸರನ್ನು ನಾಮಿನಿಯಾಗಿ ಕೊಟ್ಟಿದ್ದರು ಎಂದರೆ ಸರಿ. ಆ ಪಾಲಿಸಿ ಮೊತ್ತ ರೂ.ಐದು ಲಕ್ಷ ಹಣವನ್ನು ಬಿಡಿಸಿಕೊಂಡು ಚಾಸಾ.1 ರವರೆಗ ಕೊಡಲು ಪ್ರಯತ್ನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಚಾಸಾ.1 ರವರು ನನ್ನ ಇನ್ನೊಬ್ಬ ಮಗ ರಾಜುರವರ ಮನೆಗೂ ಸಹ ಹೋಗಲು ಬಿಡದೇ ನನ್ನನ್ನು ಅವರ ಮನೆಯಲ್ಲಿಯೇ ಇರಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

6) ನನ್ನ ತಂದೆ ಮನೆಯಿಂದ ನನಗೆ 1 ಎಕರೆ 10 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಆ ಆಸ್ತಿಯನ್ನು ಮತ್ತು ಸದರಿ ಎಲ್ ಐ ಸಿ ಪಾಲಿಸಿಯಿಂದ ಬಂದ ಹಣವನ್ನು ಚಾಸಾ.1 ರವರೇ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ 4 ನೇಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸಿರುತ್ತಾನೆ ಎಂದರೆ ಸರಿಯಲ್ಲ.

7) ನಾವು ವಾಸ ಮಾಡುತ್ತಿರುವ ಕಡೆ 4 ಮನೆಗಳು ಇದ್ದು ಅದರಲ್ಲಿ ಒಂದು ಮನೆ 4 ನೇ ಆರೋಪಿಯ ಹೆಸರಿನಲ್ಲಿರುತ್ತದೆ. ಆ ಮನೆಯನ್ನೂ ಸಹ ಚಾಸಾ.1 ರವರೇ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ನಾನು ಮತ್ತು ಚಾಸಾ.1 ರವರು 4 ನೇ ಆರೋಪಿಯ ವಿರುದ್ದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಾದ ಎರಡೂವರೆ ತಿಂಗಳ ನಂತರ ನಾನು ಪೋ.ಠಾಣೆಗೆ ಹೋಗಿರುತ್ತೇನೆ. ಸಾಕ್ಷಿ ಮುಂದುವರಿದು ನನಗೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿ ಮತ್ತು ಹೇಮಲಾತಾರವರ ಪ್ರೀತಿಯ

ವಿಚಾರವನ್ನಾಗಲೀ , ಆಸ್ತಿಯ ವಿಚಾರದಲ್ಲಿ 4 ನೇ ಆರೋಪಿ ಮತ್ತು ಮರಿಯಪ್ಪರವರ ನಡುವೆ ಇದ್ದ ದ್ವೇಷದ ಬಗ್ಗೆ ಆಗಲೀ ನಾನು ಪೊಲೀಸರ ಮುಂದೆ ಹೋಗುವುದಕ್ಕಿಂತ ಮೊದಲು ನಾನು ಯಾರೊಂದಿಗೂ ಹೇಳಿರುವುದಿಲ್ಲ. ಆಸ್ತಿಗಳ ವಿಚಾರವಾಗಿ 4 ನೇ ಆರೋಪಿಯನ್ನು ಸಿಲುಕಿಸುವ ಸಲುವಾಗಿ ನಾನು ಮತ್ತು ಚಾಸಾ.1 ರವರು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ.ಎನ್.ಎಸ್ ವಕೀಲರಿಂದಃ**

8) ಚಾಸಾ.2, 11, 13, 19, 20, 21, 22 ರವರು ನಮ್ಮ ಗ್ರಾಮದವರು ಎಂದರೆ ಸರಿ. ಚಾಸಾ.13 ರವರು ಗೋವಿಂದಪ್ಪರವರ ಹೆಂಡತಿ ಎಂದರೆ ಸರಿ. ಗೋವಿಂದಯ್ಯ ಮತ್ತು ಗಿರಿಯಪ್ಪ ರವರು ಜೀವಂತವಾಗಿದ್ದಾಗ ಅವರಿಬ್ಬರ ನಡುವೆ ಮಾತುಕತೆ ಇರಲಿಲ್ಲ ದ್ವೇಷ ಇತ್ತು ಎಂದರೆ ಸರಿಯಲ್ಲ. ನನ್ನ ಮಗ ಸಾಯುವುದಕ್ಕಿಂತ ಒಂದು ವರ್ಷದ ಹಿಂದೆ 1 ನೇ ಆರೋಪಿ ಅವರ ತಾಯಿಯನ್ನು ಕರೆದುಕೊಂಡು ಹೆಣ್ಣು ಕೇಳಲು ಬಂದಿದ್ದ. ಆಗ ನಾನು ಮತ್ತು ಮರಿಯಪ್ಪ ಮಾತ್ರ ಇದ್ದೆವು. ಆಗ 1 ನೇ ಆರೋಪಿ ಮತ್ತು ಮರಿಯಪ್ಪರವರ ನಡುವೆ ದ್ವೇಷ ಇರಲಿಲ್ಲ , ಚೆನ್ನಾಗಿಯೇ ಇದ್ದರು ಎಂದರೆ ಸರಿ. 1 ನೇ ಆರೋಪಿಯು ನಮ್ಮ ಊರಿನಲ್ಲಿ ಕೂಲಿ ಕೆಲಸಕ್ಕೆ ಹೋಗಿ ಮರದ ಮೇಲಿಂದ ಬಿದ್ದು ಆಸ್ಪತ್ರೆಯಲ್ಲಿ ದಾಖಲಾಗಿದ್ದ ಎಂದರೆ ಸರಿ. ನಂತರ 1 ನೇ ಆರೋಪಿಯು ತನ್ನ ತಾಯಿಯ ಮನೆ ಬೆಂಗಳೂರಿಗೆ ಹೋದ ಎಂದರೆ ಸರಿ. 4 ನೇ ಆರೋಪಿ ಮತ್ತು ಅವರ ಮಗಳು ಆಸ್ತಿಯ ವಿಚಾರದಲ್ಲಿ ಮರಿಯಪ್ಪರವರ ಮೇಲೆ ದ್ವೇಷ ಇತ್ತು ಎಂದು ನಾನು ದೂರನ್ನು ಕೊಟ್ಟಿರುವುದಿಲ್ಲ.

9) ಚಾಸಾ.1 ರವರ ಮನೆಗೂ ಮತ್ತು ಮರಿಯಪ್ಪರವರ ಮನೆಗೂ ಸುಮಾರು 20 ಅಡಿ ಅಂತರವಿರುತ್ತದೆ. ಮರಿಯಪ್ಪರವರ ಮನೆಯಲ್ಲಿ ಮಾತನಾಡಿದರೆ ಚಾಸಾ.1 ರವರ ಮನೆಗೆ ಕೇಳಿಸುವುದಿಲ್ಲ ಎಂದರೆ ಸರಿ. ನಾನು ಪೊಲೀಸರ ಮುಂದೆ ನನ್ನ ಮಗ ಮರಿಯಪ್ಪ ಹೇಮಲತಾರವರು 1 ನೇ ಆರೋಪಿಯನ್ನು ಮದುವೆಯಾಗುವುದು ಬೇಡ

ಎಂದು ಹೇಳಿದ್ದ ಎಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಎಷ್ಟು ಬಾರಿ ನಾನು ಹೇಳಿಕೆಯನ್ನು ಕೊಟ್ಟಿದ್ದೆ ಎಂದು ನೆನಪಿಲ್ಲ. ಹೇಮಲತಾರವರು ತನ್ನ ತಂದೆಯನ್ನು ಯಾರೋ ಕೊಲೆ ಮಾಡಿರುತ್ತಾರೆಂದು ದೂರು ನೀಡಿದ್ದರು ಎಂದರೆ ಸರಿ.

(2 ನೇ ಆರೋಪಿ ಪರ ವಕೀಲರು 1, 3 ಮತ್ತು 4 ನೇ ಆರೋಪಿಗಳ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಳ್ಳುವಂತೆ ಮನವಿ ಮಾಡಿರುತ್ತಾರೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ